

**1992ರಿಂದ 1995ರವರೆಗೆ ಕ್ರೊಯೇಷಿಯಾ, ಬೋಸ್ನಿಯಾ, ಹರ್ಜೆಗೋವಿನಾದ ಮಹಿಳೆಯರು ಸರ್ಬಿಯನ್ ಸೈನ್ಯದ ಅಮಾನವೀಯ ನಡವಳಿಕೆಗೆ ತುತ್ತಾದರು. ಯುದ್ಧ ಕಾಲದಲ್ಲಿ ಸಾವಿರಾರು ಅತ್ಯಾಚಾರಗಳು, ಲೈಂಗಿಕ ಹಿಂಸೆಗಳು ನಡೆದವು.**



ಸ್ಮರಣಿಕೆಗಳ ಅಂಗಡಿಗಳು

ಸೆರೆಹಿಡಿಯುವ ಪ್ರಯತ್ನ ಮಾಡುತ್ತಿದ್ದ ನನಗೆ ಒಂದು ಮೂಲೆಯಲ್ಲಿ ಒಬ್ಬಂಟಿ ಮಹಿಳೆ ದುಃಖತಪ್ತಳಾಗಿ ತಲೆ ಬಗ್ಗಿಸಿ ತನ್ನ ನೋವನ್ನೆಲ್ಲಾ ತೋಡಿಕೊಳ್ಳುವಂತೆ ಕುಳಿತಿರುವುದು ಕಂಡಿತು. ನಮಗೆ ಮಾರ್ಗದರ್ಶಿಯಾಗಿ ಬಂದಿದ್ದ ಸ್ಥಳೀಯ ಟ್ರಾವೆಲ್ಸ್‌ನ ಮಹಿಳೆಗೆ ಈ ಚಿತ್ರವನ್ನು ತೋರಿಸಿದೆ. ನನ್ನನ್ನು ಒಮ್ಮೆ ಕಣ್ಣಲ್ಲಿ ಕಣ್ಣಿಟ್ಟು ನೋಡಿದ ಆಕೆ, 'ಇಲ್ಲಿನ ಮಹಿಳೆಯರ ಪರಿಸ್ಥಿತಿ ನಿಮಗೆ ಅರಿವಿದ್ದಂತಿಲ್ಲ. ಒಡಲೊಳಗೆ ಜ್ವಾಲಾಮುಖಿಯನ್ನು ಇಟ್ಟುಕೊಂಡು ಬದುಕುತ್ತಿದ್ದಾರೆ. ಮೊದಲು ನಗರದ ಚಂದದ ಮುಖ ನೋಡೋಣ, ಆಮೇಲೆ ಆ ದುಃಖದ ಸಂಗತಿ ವಿವರಿಸುವೆ' ಎಂದು ಸೂಕ್ಷ್ಮವಾಗಿ ಪ್ರತಿಕ್ರಿಯಿಸಿದರು.

ಮೋಸ್ಟಾ ಬೋಸ್ನಿಯಾ ಮತ್ತು ಹರ್ಜೆಗೋವಿನಾ ದೇಶದ ದಕ್ಷಿಣ ಭಾಗದಲ್ಲಿರುವ ಸುಂದರ ನಗರ. ತನ್ನ ಒಟ್ಟೋಮನ್ ಕಾಲದ ವಾಸ್ತುಶಿಲ್ಪ, ಹಸಿರು ನೀಲಿ ಬಣ್ಣದ ನೆರೆತ್ವಾ ನದಿ, ಪ್ರಸಿದ್ಧ ಸೇತುವೆ ಮತ್ತು ನುಣುಪಾದ ಕಲ್ಲುಗಳ ನೆಲಹಾಸಿನ ರಸ್ತೆಗೆ ಇದು ಹೆಸರುವಾಸಿ.

ನದಿದಂಡೆಯಲ್ಲಿ ಸವೆದಿರುವ ಕಲ್ಲುಗಳನ್ನು ಹಾಸಿ ಮಾಡಿರುವ ಕಲಾತ್ಮಕ ರಸ್ತೆಯಲ್ಲಿ ನಡೆಯುತ್ತಾ, ಅಕ್ಕಪಕ್ಕದಲ್ಲಿರುವ ಸ್ಮರಣಿಕೆಗಳ ಅಂಗಡಿಗಳಲ್ಲಿ ಇಣುಕುತ್ತಾ ನಾವು ಹಳೆಯ ಸೇತುವೆ ಬಳಿ ಹೋದೆವು.

ಸ್ಟಾರಿ ಮೋಸ್ಟ್ (ಹಳೆಯ ಸೇತುವೆ) ಐತಿಹಾಸಿಕ ಮಹತ್ವವನ್ನು ಹೊಂದಿದೆ. ಇದನ್ನು 1566ರಲ್ಲಿ ಒಟ್ಟೋಮನ್ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಿಸಲಾಯಿತು. ಸುಮಾರು 400 ವರ್ಷಗಳ ಕಾಲ ಪೂರ್ವ ಮತ್ತು ಪಶ್ಚಿಮದ ನಡುವಿನ ಕೊಂಡಿಯಾಗಿ ನಿಂತಿದ್ದ ಇದನ್ನು ನವೆಂಬರ್ 1993ರಲ್ಲಿ ಬೋಸ್ನಿಯಾ ಯುದ್ಧದ ಸಮಯದಲ್ಲಿ ನಾಶಪಡಿಸಲಾಯಿತು. ಏಕತೆಯ ಸಂಕೇತವಾಗಿದ್ದ ಸೇತುವೆ, ಬೋಸ್ನಿಯನ್ ಯುದ್ಧದ ಸಮಯದಲ್ಲಿ ವಿಭಜನೆಯ ಸಂಕೇತವಾಯಿತು. ಜನಾಂಗೀಯ ಯುದ್ಧದಲ್ಲಿ ನಾಶವಾದ ಈ ಸೇತುವೆ ಬಹುಸಂಸ್ಕೃತಿಯ ನಾಶದ ಸಂಕೇತವಾಗಿಯೂ ಬಿಂಬಿತವಾಯಿತು.

ಯುನೆಸ್ಕೋ ಸಹಯೋಗದೊಂದಿಗೆ ಹಳೆಯ ಕಲ್ಲುಗಳನ್ನು ಮತ್ತು ಸಾಂಪ್ರದಾಯಿಕ ವಿಧಾನಗಳನ್ನು ಬಳಸಿ ಈ ಸೇತುವೆಯನ್ನು 2004ರಲ್ಲಿ ಮರುನಿರ್ಮಿಸಲಾಯಿತು. 2005ರಲ್ಲಿ ವಿಶ್ವ ಪಾರಂಪರಿಕ ತಾಣವೆಂದು ಘೋಷಿಸಲಾಯಿತು. ಪ್ರವಾಸಿಗರು ಈ ಸೇತುವೆಯನ್ನು ಸುಂದರ ಪ್ರವಾಸಿ ತಾಣವಾಗಿ ನೋಡಿದರೆ, ಸ್ಥಳೀಯರು ಇದನ್ನು ಯುದ್ಧದ ಕಹಿನೆನಪಿನಂತೆ ಕಾಣುತ್ತಾರೆ. ಭೌತಿಕವಾಗಿ ಸೇತುವೆಯು ಪುನರ್ನಿರ್ಮಾಣಗೊಂಡಿದ್ದರೂ, ಎರಡು ಸಮುದಾಯಗಳ ನಡುವಿನ 'ಮನಸ್ಸಿನ ಸೇತುವೆ' ಇಂದಿಗೂ ಸಂಪೂರ್ಣವಾಗಿ ಬೆಸೆದಿಲ್ಲ.

ನೆರೆತ್ವಾ ನದಿಯ ಪಶ್ಚಿಮ ದಂಡೆಯಲ್ಲಿ ಹೆಚ್ಚಾಗಿ ರೋಮನ್ ಕ್ಯಾಥೋಲಿಕ್ ಧರ್ಮವನ್ನು ಅನುಸರಿಸುವ ಬೋಸ್ನಿಯನ್ ಕ್ರೋಯಾಟ್ ಸಮುದಾಯದವರು ವಾಸಿಸುತ್ತಾರೆ. ಪೂರ್ವ ದಂಡೆಯಲ್ಲಿ ಬೋಸ್ನಿಯಾಕ್ (ಮುಸ್ಲಿಂ) ಸಮುದಾಯದವರು ವಾಸಿಸುತ್ತಾರೆ. ನಗರವು ಎರಡೂ ಕಡೆಗಳಲ್ಲಿ ಪ್ರತ್ಯೇಕ ಸಾರ್ವಜನಿಕ ಸೇವೆಗಳನ್ನು ಹೊಂದಿದೆ. ಅಂದರೆ ಎರಡು ವಿಭಿನ್ನ ಅಂಚೆ ವ್ಯವಸ್ಥೆಗಳು, ವಿದ್ಯುತ್ ಪೂರೈಕೆದಾರರು, ಬಸ್ ಕಂಪನಿಗಳು ಮತ್ತು ಶಾಲೆಗಳಲ್ಲಿ ಎರಡು ವಿಭಿನ್ನ ಪಠ್ಯಕ್ರಮಗಳು ಇಂದಿಗೂ ಜಾರಿಯಲ್ಲಿವೆ.

ಸ್ಥಳೀಯ ಕೆಲವು ಡೈವರ್‌ಗಳು ಸೇತುವೆ ಮೇಲಿನಿಂದ ನೀರಿಗೆ ಹಾರಿ ಸಾಹಸ ಪ್ರದರ್ಶಿಸುತ್ತಾರೆ. ಪ್ರವಾಸಿಗರಿಂದ ಡಾಲರ್‌ಗಳನ್ನು ಸಂಗ್ರಹಿಸುವ ಅವರು, ಒಂದಷ್ಟು ಹಣ ಸಂಗ್ರಹವಾಗುತ್ತಿದ್ದಂತೆ ಸೇತುವೆ ಮೇಲಿನಿಂದ ನದಿಗೆ ಹಾರುತ್ತಾರೆ. ನಾವು ಹೋಗುವಷ್ಟರಲ್ಲಿ ಒಬ್ಬ ಡೈವರ್ ನೀರಿಗೆ ಹಾರುತ್ತಿದ್ದ. ಇಲ್ಲಿ ಪಾರಂಪರಿಕ ಡೈವಿಂಗ್ ಸ್ಪರ್ಧೆಯನ್ನೂ ಆಯೋಜಿಸುವರಂತೆ.

ಪೇಟೆಯನ್ನೆಲ್ಲಾ ಒಮ್ಮೆ ಸುತ್ತುಹಾಕಿದೆವು. ನಮ್ಮಲ್ಲಿ ಕೆಲವರು ಒಂದಷ್ಟು ಸ್ಮರಣಿಕೆಗಳು, ತಾಮ್ರದ ಕರಕುಶಲ ವಸ್ತುಗಳು, ಕೈಯಿಂದ ಮಾಡಿದ ಆಭರಣಗಳು, ಸ್ಕಾರ್ಫ್, ಫ್ರಿಡ್ಜ್ ಮ್ಯಾಗ್ನೆಟ್ ಮುಂತಾದವುಗಳನ್ನೆಲ್ಲಾ ಕೊಂಡರು. ಉದ್ದುದ್ದ ಬುಲೆಟ್‌ಗಳಿಂದ ಪೆನ್ನುಗಳು, ಕೀಚೈನ್, ಸಣ್ಣ ಪುಟ್ಟ ಆಟಿಕೆಗಳನ್ನು ತಯಾರಿಸಿಟ್ಟಿದ್ದುದು ಆಕರ್ಷಿಸಿತು. ಅಮಾಯಕರ ಪ್ರಾಣ ಹರಣ ಮಾಡಿರುವ ಇವನ್ನು ಕೊಳ್ಳಲು ಮನಸ್ಸಾಗಲಿಲ್ಲ. ಅಲ್ಲಲ್ಲಿ ಮಹಿಳೆಯರು ಪುಟ್ಟ ಮಕ್ಕಳನ್ನು ತೊಡೆ ಮೇಲೆ ಕೂರಿಸಿಕೊಂಡು ಭಿಕ್ಷೆ ಬೇಡುತ್ತಿದ್ದುದು ಕಂಡುಬಂದಿತು. ಯೂರೋಪ್ ದೇಶಗಳಲ್ಲೂ ಜನ ಭಿಕ್ಷೆ ಬೇಡುತ್ತಾರಾ ಎಂದು ನಮ್ಮ ಜೊತೆಗಿದ್ದವರು ಅಚ್ಚರಿಪಟ್ಟರು. ಬಹುತೇಕ ಹೆಣ್ಣುಮಕ್ಕಳೇ